# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನಿಗಮ ಕಛೇರಿ:
ನಂ–29, ವಿಜಯನಗರ 2ನೇ ಹಂತ,
ಹಿನಕಲ್, ಮೈಸೂರು–5700117
ವೆಬ್ ಸೈಟ್: www.cescmysore.org
CIN:U40109KA2004SGC035177

ಅಧೀಕ್ಷಕ ಇಂಜಿನಿಯರ್ (ವಿ), ರವರಕಛೇರಿ,
ಕಾ ಮತ್ತು ಪಾ ವೃತ್ತ, ಚಾ.ನಗರ ಮತ್ತು ಕೊಡಗು,
ಶ್ರೀ ಹರ್ಷರಸ್ತೆ, ಚಾ.ವಿ.ಸ.ನಿ.ನಿ., ಮೈಸೂರು.
ದೂರವಾಣಿ: 0821–2420850, ಫ್ಯಾಕ್ಸ್:0821–2434077
ಈ–ಮೇಲ್: seechnkodagu@cescmysore.org

ಸಂಖ್ಯೆ: ಅಇಂ(ವಿ)/ಕಾನಿಇಂ/ಸಕಾನಿಇಂ/ಕ–127/2017–18/ eys-193

ದಿನಾಂಕ: 01.01.2018

## ಜನ ಸಂಪರ್ಕ ಸಭೆಯ ನಡಾವಳಿ

ದಿನಾಂಕ 28.12.2017 ಗುರುವಾರ ಪೂರ್ವಾಹ್ನ 11.00 ಘಂಟೆಗೆ ಶ್ರೀಯುತ ರಾಮಚಂದ್ರ.ಕೆ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ)ಚಾಮರಾಜನಗರ–ಕೊಡಗು ವೃತ್ತ, ಸೆಸ್ಕ್ ಮೈಸೂರುರವರ ಅಧ್ಯಕ್ಷತೆಯಲ್ಲಿ ಸೋಮವಾರಪೇಟೆ ಉಪವಿಭಾಗದಲ್ಲಿ ನಡೆದ ಜನ ಸಂಪರ್ಕ ಸಭೆಯ ನಡಾವಳಿ.

**ಉಪಸ್ಥಿತರಿದ್ದ ಅಧಿಕಾರಿಗಳು:–**

1. ಶ್ರೀಯುತ ರಾಮಚಂದ್ರ.ಕೆ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ)ಚಾಮರಾಜನಗರ–ಕೊಡಗು ವೃತ್ತ, ಸೆಸ್ಕ್ ಮೈಸೂರು.
2. ಶ್ರೀಮತಿ ತಾರಾ.ಎನ್ ಕಾರ್ಯನಿರ್ವಾಹಕ ಇಂಜಿನಿಯರ್(ವಿ)ಚಾಮರಾಜನಗರ–ಕೊಡಗು ವೃತ್ತ, ಸೆಸ್ಕ್ ಮೈಸೂರು.
3. ಶ್ರೀ.ಪಿ.ಎನ್.ದೇವಯ್ಯ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ತಾ)ಸೆಸ್ಕ್ ವಿಭಾಗ ಕಛೇರಿ ಮಡಿಕೇರಿ.
4. ಶ್ರೀ.ವಿ.ಎಂ.ನಾಗರಾಜು ಲೆಕ್ಕಾಧಿಕಾರಿಯವರು ಮಡಿಕೇರಿ.
5. ಶ್ರೀಮತಿ ಅಲ್ಫೋನ್ಸಾ.ಪಿ.ಜೆ ಲೆಕ್ಕಾಧಿಕಾರಿ ಆಂತರಿಕ ಪರಿಶೋಧಕರು ಮಡಿಕೇರಿ ವಿಭಾಗ.
6. ಶ್ರೀ. ಅಶೋಕ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)(ಪ್ರಭಾರ), ಸೆಸ್ಕ್ ಉಪವಿಭಾಗ ಕಛೇರಿ ಸೋಮವಾರಪೇಟೆ.
7. ಶ್ರೀ.ಬಿ.ದಯಾನಂದ ಸಹಾಯಕ ಇಂಜಿನಿಯರ್(ವಿ)(ಪ್ರಭಾರ) ಚಾ.ವಿ.ಸ.ನಿ.ನಿ ಸೋಮವಾರಪೇಟೆ.
8. ಶ್ರೀ.ಬಸಯ್ಯ ಹಿರೇಮಠ್ ಕಿರಿಯ ಇಂಜಿನಿಯರ್(ವಿ)(ಪ್ರಭಾರ) ಚಾ.ವಿ.ಸ.ನಿ.ನಿ ಶನಿವಾರಸಂತೆ.
9. ಶ್ರೀ. ರುಕ್ಮಾಂಗದ ಕುಮಾರ್, ಕಿರಿಯ ಇಂಜಿನಿಯರ್(ವಿ)(ಪ್ರಭಾರ) ಚಾ.ವಿ.ಸ.ನಿ.ನಿ ಶಾಂತಳ್ಳಿ.
10. ಶ್ರೀ.ರಂಗಸ್ವಾಮಿ ಕಿರಿಯ ಇಂಜಿನಿಯರ್(ವಿ)(ಪ್ರಭಾರ) ಚಾ.ವಿ.ಸ.ನಿ.ನಿ ಆಲೂರು ಸಿದ್ದಾಪುರ.
11. ಶ್ರೀ.ಮನುಕುಮಾರ್ ಕಿರಿಯ ಇಂಜಿನಿಯರ್(ವಿ)(ಪ್ರಭಾರ) ಚಾ.ವಿ.ಸ.ನಿ.ನಿ ಕೊಡ್ಲಿಪೇಟೆ.
12. ಶ್ರೀ.ಎಂ.ಸಿ.ಗಿರಿ ಹಿರಿಯ ಸಹಾಯಕ ಚಾ.ವಿ.ಸ.ನಿ.ನಿ ಸೋಮವಾರಪೇಟೆ.
13. ಶ್ರೀ.ಬಿ.ಎಸ್.ದೀಪಕ್ ಹಿರಿಯ ಸಹಾಯಕ ಚಾ.ವಿ.ಸ.ನಿ.ನಿ ಶನಿವಾರಸಂತೆ.

ಸಭೆಯಲ್ಲಿ ಸೋಮವಾರಪೇಟೆ ಉಪವಿಭಾಗಕ್ಕೆ ಸಂಬಂದಿಸಿದಂತೆ ಬಂದ ದೂರುಗಳು ಹಾಗೂ ತೆಗೆದುಕೊಂಡ ಕ್ರಮಗಳು ಈ ಕೆಳಗಿನಂತಿರುತ್ತವೆ.

| ಕ್ರಮ ಸಂ | ಗ್ರಾಹಕರ ಹೆಸರು ಮತ್ತು ವಿಳಾಸ | ದೂರು | ಸಲಹೆ |
|---|---|---|---|
| 1. | ಗಣೇಶ್ ದೊಡ್ಡಹಣಕೋಡು ಗ್ರಾಮ | ಅಕ್ರಮ ಸಕ್ರಮ ಯೋಜನೆಯಲ್ಲಿ ಎಳೆಸಿರುವ 4 ವೈರ್ ತಂತಿಯು ತುಂಬಾ ಕೆಳಗೆ ಬಂದು ಜೋತುಬಿದ್ದು, ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿದೆ ಎಂದು ತಿಳಿಸಿದರು. | ತುರ್ತಾಗಿ ಮಧ್ಯಂತರ ಕಂಬವನ್ನು ಅಳವಡಿಸಿಕೊಡುವಂತೆ ಅಧೀಕ್ಷಕ ಇಂಜಿನಿಯರ್(ವಿ)ರವರು ಸೂಚಿಸಿದರು. |
| 2. | ಧರ್ಮಪ್ಪ.ಎಂ.ಪಿ ಐಗೂರು ಗ್ರಾಮ | 1)ಗುಂಡಿಕಿಬ್ಬೆಟ್ಟ ಗ್ರಾಮಕ್ಕೆ ಕುಡಿಯುವ ನೀರಿಗೆ ಹೆಚ್ಚುವರಿ ಪರಿವರ್ತಕವನ್ನು ಅಳವಡಿಸುವಂತೆ ಕೇಳಿಕೊಂಡರು.<br>2)ರಮಾನಂದ್ ಐಗೂರುರವರ ಹಸುವು ವಿದ್ಯುತ್ ಸ್ಪರ್ಶದಿಂದ ಮೃತ ಪಟ್ಟು 4 ವರ್ಷಗಳಾಗಿದ್ದರೂ ಇನ್ನೂ ಪರಿಹಾರ ಸಿಗದಿರುವ ಬಗ್ಗೆ ಕೇಳದರು.<br>3)ಸಲಹಾ ಸಮಿತಿ ಸದಸ್ಯರಿಗೆ ಐ.ಡಿ ಕಾರ್ಡ್ ದೊರಕಿಲ್ಲದಿರುವ ಬಗ್ಗೆ ಕೇಳದರು.<br>4)ಹೊಸತೋಟ ಗ್ರಾಮದಲ್ಲಿ ಕಂಬವು ದುರಸ್ತಿ ಸ್ಥಿತಿಯಲ್ಲಿದ್ದು ಬದಲಾಯಿಸಲು ತಿಳಿಸಿದರು.<br>5)ವಿದ್ಯುತ್ ಕಂಬಗಳಿಗೆ ಟಿ.ವಿ ಕೇಬಲ್ ಅಳವಡಿಸಿರುವ ಬಗ್ಗೆ ಕೇಳದರು. | 1)IPDS ಯೋಜನೆಯಡಿಯಲ್ಲಿ ಪರಿವರ್ತಕವನ್ನು ಅಳವಡಿಸುವಂತೆ ಅಧೀಕ್ಷಕ ಇಂಜಿನಿಯರ್(ವಿ) ರವರು ಸೂಚಿಸಿದರು.<br>2)ಪರಿಶೀಲಿಸಿ ಪರಿಹಾರವನ್ನು ಒದಗಿಸುವುದಾಗಿ ಅಧೀಕ್ಷಕ ಇಂಜಿನಿಯರ್(ವಿ)ರವರು ತಿಳಿಸಿದರು.<br>3)ಪರಿಶೀಲಿಸಿ ಮಾಹಿತಿ ಪಡೆದು ಕ್ರಮ ಕೈಕೊಳ್ಳಲಾಗುವುದು ಎಂದು ತಿಳಿಸಿದರು.<br>4)ತುರ್ತಾಗಿ ಬದಲಿಸಲು ಅಧೀಕ್ಷಕ ಇಂಜಿನಿಯರ್ (ವಿ)ರವರು ಸೂಚಿಸಿದರು.<br>5)ಪ್ರತಿ ಕಂಬಕ್ಕೆ 1 ವರ್ಷಕ್ಕೆ 150/–ಗಳನ್ನು ವಸೂಲಿ ಮಾಡಲು ಇನ್‌ಟಿಮೇಷನ್ ನೀಡಿ ಹಣ ಪಾವತಿಸದಿದ್ದಲ್ಲಿ ಕೇಬಲ್ ಕಟ್ ಮಾಡುವಂತೆ ಶಾಖಾಧಿಕಾರಿಗಳಿಗೆ ಸೂಚಿಸಿದರು. |

DGM(RA-1) 06/1/18

| | | | |
|---|---|---|---|
| 3. | ದುದ್ದಯ್ಯ.ಬಿ.ಎಂ<br>ತಲ್ತಾರೆ ಶೆಟ್ಟಳ್ಳಿ | ತಲ್ತಾರೆ ಶೆಟ್ಟಳ್ಳಿಯಲ್ಲಿರುವ ಟಿ.ಸಿಯ ಕಂಬಗಳು ಶಿಥಿಲಗೊಂಡಿದ್ದು ಬರೀ ಗೈ ವೈರ್‌ನ ಸಹಾಯದಿಂದ ನಿಂತಿದ್ದು, ತುಂಬಾ ಅಪಾಯಕಾರಿ ಸ್ಥಿತಿಯಲ್ಲಿದೆ ಎಂದು ತಿಳಿಸಿದರು. | ತುರ್ತಾಗಿ ದುರಸ್ತಿ ಕಾರ್ಯ ಮಾಡುವಂತೆ ಅಧೀಕ್ಷಕ ಇಂಜಿನಿಯರ್ (ವಿ)ರವರು ಸೂಚಿಸಿದರು. |
| 4. | ಸಂತೋಷ್ ರೈ<br>ಬಳಗುಂದ ಗ್ರಾಮ | 1)ತಮ್ಮ ಫೀಡರ್‌ನಲ್ಲಿ ಸ್ವಲ್ಪ ಮಳೆ ಬಂದರೂ ಟ್ರಿಪ್ಪಿಂಗ್ ಸಮಸ್ಯೆ ಉಂಟಾಗುವುದರಿಂದ ಟೌನ್ ಫೀಡರ್‌ನಿಂದ ಸಂಪರ್ಕ ಕೊಡುವಂತೆ ಕೇಳಿಕೊಂಡರು.<br>2)ಜನಸಂಪರ್ಕ ಸಭೆಗೆ ಹೆಚ್ಚಿನ ಪ್ರಚಾರ ನೀಡುವಂತೆ ಸೂಚಿಸಿದರು.<br><br>3)ಟಿ.ಸಿ.ಗಳಿಗೆ ಫೆನ್ಸಿಂಗ್ ಮಾಡಬೇಕು ಇದರಿಂದ ದನಕರುಗಳಿಗೆ ತೊಂದರೆಯಾಗುತ್ತಿದೆ ಸೂಚಿಸಿದರು. | 1)ಫೀಡರ್ ಬದಲಾಯಿಸಲು ಸಾಧ್ಯವಿರುವುದಿಲ್ಲ ಆದರೆ ಜಂಗಲ್ ಕಟ್ಟಿಂಗ್ ಮಾಡಿ ಟ್ರಿಪ್ಪಿಂಗ್ ಸಮಸ್ಯೆ ನಿವಾರಿಸಲು ಅಧೀಕ್ಷಕ ಇಂಜಿನಿಯರ್ (ವಿ) ಅವರು ಸೂಚಿಸಿದರು.<br>2)ಮುಂದಿನ ದಿನಗಳಲ್ಲಿ ಪಂಚಾಯ್ತಿವಾರು, ಟಿ.ವಿ., ರೇಡಿಯೋ ಮತ್ತು ನ್ಯೂಸ್ ಪೇಪರ್‌ಗಳಲ್ಲಿ ಜಾಹಿರಾತು ನೀಡಿ ಹೆಚ್ಚಿನ ಪ್ರಚಾರ ನೀಡುವುದಾಗಿ ತಿಳಿಸಿದರು.<br>3)ಮಲೆನಾಡು ಪ್ರದೇಶಗಳಲ್ಲಿ ಕಾಡು ಬೆಳೆದು ಹಾವುಗಳು ಸೇರಿಕೊಳ್ಳುವುದರಿಂದ ಟಿ.ಸಿಗಳ ಮೇಲ್ವಿಚಾರಣೆ ಮಾಡುವುದು ಕಷ್ಟಕರವಾಗುವುದರಿಂದ ಫೆನ್ಸಿಂಗ್ ಮಾಡುವುದು ಸಾಧ್ಯವಿರುವುದಿಲ್ಲ ಹಾಗೂ ಪ್ರಸ್ತುತ ಯಾವುದೇ ಯೋಜನೆಗಳಲ್ಲವೆಂದು ತಿಳಿಸಿದರು. |
| 5. | ಬಸವರಾಜು.ಬಿ.ಎಸ್<br>ಬೇಳೂರು ಗ್ರಾಮ | ಟಿ.ಸಿ ತೋಟದೊಳಗೆ ಇರುವುದನ್ನು ರಸ್ತೆ ಬದಿಗೆ ಶಿಫ್ಟ್ ಮಾಡಿಕೊಡಬೇಕು. ಫ್ಯೂಸ್ ಹೋದರೆ ಆನೆಗಳ ಕಾಟ ಇರುವುದರಿಂದ ತುಂಬಾ ತೊಂದರೆಯಾಗುತ್ತಿದೆ ಎಂದು ಕೇಳಿಕೊಂಡರು. | Estimate ಮಾಡಿ ಕಳುಹಿಸಲು ಶಾಖಾಧಿಕಾರಿಯವರಿಗೆ ಸೂಚಿಸಲಾಯಿತು. |
| 6. | ಸಹೀರಾ<br>ಅಲೇಕಟ್ಟೆ ರಸ್ತೆ | ಆಶ್ರಯಾ ಯೋಜನೆಯಡಿ ತಮ್ಮ ಮನೆಗೆ ಉಚಿತವಾಗಿ ವಿದ್ಯುತ್ ಸಂಪರ್ಕ ನೀಡುವಂತೆ ಕೇಳಿಕೊಂಡರು. | ಪಂಚಾಯ್ತಿ ವತಿಯಿಂದ ಸಂಪರ್ಕ ತೆಗೆದುಕೊಳ್ಳುವಂತೆ ಸೂಚಿಸಿದರು. |
| 7. | ಎಂ.ಈ.ಸುಬ್ಬಯ್ಯ<br>ಮಳ್ತೆ ಗ್ರಾಮ | ಎಲಿಫೆಂಟ್ ಕಾರಿಡಾರ್ ಪ್ರದೇಶಗಳಲ್ಲಿ ಬೀದಿದೀಪಗಳನ್ನು ಅಳವಡಿಸುವಂತೆ ಸೂಚಿಸಿದರು. | ಪಂಚಾಯ್ತಿ ವತಿಯಿಂದ ಬೀದಿದೀಪಗಳನ್ನು ಅಳವಡಿಸಿಕೊಳ್ಳುವಂತೆ ತಿಳಿಸಿದರು. |
| 8. | ಎಸ್.ಪಿ.ಪ್ರಸನ್ನ<br>ಎಂ.ಡಿ.ಬ್ಲಾಕ್ | ನೂತನ 66/11 ಕೆ.ವಿ ಸ್ಟೇಷನ್‌ನ ನಿರ್ಮಾಣದ ಬಗ್ಗೆ ಕೇಳಿದರು. | ಪ್ರೋಸೆಸಿಂಗ್ ಆಗುತ್ತಿದ್ದು ಜಾಗದ ಸರ್ವೆ ನಂ. ಸಮಸ್ಯೆಯಿಂದ ತಡವಾಗುತ್ತಿದೆ ಎಂದು ತಿಳಿಸಿದರು. |
| 9. | ಪ್ರಶಾಂತ್<br>ಬಜೆಗುಂಡಿ | 1)ಬಜೆಗುಂಡಿಯಲ್ಲಿ 11 ಕಂಬಗಳು ಬರೆ ಕುಸಿದು ಅಪಾಯಕಾರಿ ಸ್ಥಿತಿಯಲ್ಲಿದೆ ತುರ್ತಾಗಿ ಬದಲಾಯಿಸುವಂತೆ ಕೇಳಿಕೊಂಡರು.<br>2) ಬದಲಾಯಿಸಲಾಗಿರುವ ಒಂದು ಕಂಬದ ಗೈ ವೈರ್ ಅಲುಗಾಡುತ್ತಿದ್ದು ಅದನ್ನು ಸರಿ ಪಡಿಸಲು ಸೂಚಿಸಲಾಯಿತು. | 1)Estimate ಮಾಡಿ ಕಳುಹಿಸಲು ಶಾಖಾಧಿಕಾರಿಗಳಿಗೆ ಸೂಚಿಸಲಾಯಿತು.<br>2)ಸ್ಥಳ ಪರಿಶೀಲಿಸಿ ಸರಿಪಡಿಸಲು ಶಾಖಾಧಿಕಾರಿಯವರಿಗೆ ಅಧೀಕ್ಷಕ ಇಂಜಿನಿಯರ್(ವಿ) ರವರು ಸೂಚಿಸಿದರು. |
| 10 | ವಿಜಯ್ ಪತ್ರಕರ್ತರು<br>ಹಾನಗಲ್ಲು ಗ್ರಾಮ | 1)ಕ್ಲಬ್ ರೋಡ್‌ನಲ್ಲಿ ಕಾರ್ ಡಿಕ್ಕಿ ಹೊಡೆದು ಕಂಬ ಬೆಂಡಾಗಿದ್ದರೂ ಇನ್ನೂ ಬದಲಾವಣೆಯಾಗಿಲ್ಲ ಎಂದು ದೂರಿದರು.<br>2)ಮಾರ್ಕೆಟ್ ಏರಿಯಾದಲ್ಲಿ ಟೆಲಿಫೋನ್ ಕಂಬಕ್ಕೆ ವಿದ್ಯುತ್ ತಂತಿಗಳು ತಾಗುತ್ತಿದ್ದು ಪ್ಲಾಸ್ಟಿಕ್ ಪೈಪ್‌ಗಳನ್ನು ಅಳವಡಿಸಿದ್ದು ತುಂಬಾ ಅಪಾಯಕಾರಿ ಸ್ಥಿತಿಯಲ್ಲಿದೆ ಎಂದು ತಿಳಿಸಿದರು. | 1)ತುರ್ತಾಗಿ ಕಂಬ ಬದಲಾಯಿಸಲು ಅಧೀಕ್ಷಕ ಇಂಜಿನಿಯರ್(ವಿ) ರವರು ಸೂಚಿಸಿದರು.<br>2) ತುರ್ತಾಗಿ ಟೆಲಿಫೋನ್ ಕಂಬವನ್ನು ತೆರವುಗೊಳಿಸಲು ಅಧೀಕ್ಷಕ ಇಂಜಿನಿಯರ್(ವಿ) ರವರು ಸೂಚಿಸಿದರು. |
| 11. | ಎಂ.ಟಿ ಸುರೇಶ್<br>ಹೊಸಳ್ಳಿ ಗ್ರಾಮ | ಅಕ್ರಮ ಸಕ್ರಮ ಯೋಜನೆಯಲ್ಲಿ ಟಿ.ಸಿ ಅಳವಡಿಸಿದ್ದು, ಇನ್ನೂ ಚಾರ್ಜ್ ಆಗದಿರುವ ಬಗ್ಗೆ ಕೇಳಿದರು. | ಆದಷ್ಟು ಬೇಗ ಪರಿಶೀಲಿಸಿ ಟಿ.ಸಿ. ಚಾರ್ಜ್ ಮಾಡಲು ಸೂಚಿಸಲಾಯಿತು. |
| 12. | ಶುಭಾಕರ್<br>ಕಿತ್ತೂರು ಗ್ರಾಮ | ಮನೆಯ ಮೇಲೆ ಲೈನ್ ಹೋಗಿದ್ದು ಅಪಾಯಕಾರಿ ಸ್ಥಿತಿಯಲ್ಲಿದೆ ಎಂದು ತಿಳಿಸಿದರು. | ಸ್ಥಳ ಪರಿಶೀಲಿಸಿ ಕಂಬ ಬದಲಾಯಿಸಲು ಶಾಖಾಧಿಕಾರಿಯವರಿಗೆ ಸೂಚಿಸಲಾಯಿತು. |
| 13. | ರಜಿತ್<br>ತೋಳೂರುಶೆಟ್ಟಳ್ಳಿ | ಚಿಕ್ಕತೋಳೂರು ವಾಟರ್ ಸಪ್ಲೈ ಟಿ.ಸಿ ರಿಪೇರಿಯಾಗಿದ್ದರೂ ಬದಲಿಸಿಲ್ಲ ಎಂದು ದೂರಿದರು. | ಟಿ.ಸಿ ಬದಲಾವಣೆ ಮಾಡಲು ಶಾಖಾಧಿಕಾರಿಯವರಿಗೆ ಅಧೀಕ್ಷಕ ಇಂಜಿನಿಯರ್(ವಿ) ರವರು ಸೂಚಿಸಿದರು. |
| 14. | ಅಜಯ್<br>ಗುತ್ತಿಗೆದಾರರು | ಪ್ರತಿಯೊಂದು Receipt Payment ಮಾಡಲು ಶನಿವಾರಸಂತೆಗೆ ಬರಲು ಸಾಧ್ಯವಿಲ್ಲ ಕೊಡ್ಲಿಪೇಟೆಯಲ್ಲಿಯೇ ಕಟ್ಟಲು ಅನುವು ಮಾಡಿಕೊಡಬೇಕೆಂದು ಕೇಳಿಕೊಂಡರು. | ಕಂದಾಯ ಶಾಖೆಯು ಶನಿವಾರಸಂತೆಯಲ್ಲಿ ಇರುವುದರಿಂದ ಶನಿವಾರಸಂತೆಯಲ್ಲಿಯೇ ಹಣ ಪಾವತಿ ಮಾಡಲು ಸೂಚಿಸಲಾಯಿತು. |

| | | | |
|---|---|---|---|
| 15. | ರವೀಶ್.ಹೆಚ್.ಪಿ<br>ಪಿ.ಡಿ.ಓ ಹಾನಗಲ್ಲು ಪಂಚಾಯ್ತಿ | 1)ಬೀದಿದೀಪಗಳನ್ನು ಅಳವಡಿಸಲು 2ವೈರ್ ನಿಂದ 3ವೈರ್ ಅಳವಡಿಸುವಂತೆ ಕೇಳಿಕೊಂಡರು.<br><br>2)ಕಡಿಮೆ Load ಇರುವ ಸ್ಥಾವರಗಳಿಗೆ ಎಲ್.ಟಿ ರೇಟಿಂಗ್‌ನವರು ದಂಡ ವಿಧಿಸಿರುವ ಬಗ್ಗೆ ಕೇಳಿದರು | 1)Replacement of Copper wire & Conversion of 2 wire to 3 wire Estimates ಮಾಡಲು ಎಲ್ಲ ಶಾಖಾಧಿಕಾರಿಗಳಿಗೆ ಸೂಚಿಸಲಾಯಿತು.<br>2)ಕಡಿಮೆ Load ಇರುವ ಸ್ಥಾವರಗಳಿಗೆ Additional Load ತೆಗೆದುಕೊಳ್ಳುವಂತೆ ಸೂಚಿಸಲಾಯಿತು. |

ಅಧೀಕ್ಷಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವೃತ್ತ,
ಚಾಮರಾಜನಗರ ಮತ್ತು ಕೊಡಗು.

ಪ್ರತಿಯನ್ನು:
1. ಮುಖ್ಯ ಇಂಜನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರು ರವರಿಗೆ ಸಲ್ಲಿಸಲಾಗಿದೆ.
2. ಪ್ರಧಾನ ವ್ಯವಸ್ಥಾಪಕರು (ವಾಣಿಜ್ಯ), ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
3. ವ್ಯವಸ್ಥಾಪಕ ನಿರ್ದೇಶಕರ ಕಾರ್ಯನಿವಾಹಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
4. ಕಾರ್ಯನಿರ್ವಾಹಕ ಇಂಜನಿಯರ್ (ವಿ), ಚಾವಿಸನಿನಿ, ಕಾ ಮತ್ತು ಪಾ ವಿಭಾಗ, ಮಡಿಕೇರಿ ರವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
5. ನಿರ್ದೇಶಕರು(ತಾಂತ್ರಿಕ) ರವರ ತಾಂತ್ರಿಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
6. ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್ (ವಿ), ಚಾ.ವಿ.ಸ.ನಿ.ನಿ., ಸೋಮವಾರಪೇಟೆ ಉಪವಿಭಾಗ ರವರ ಮಾಹಿಗಾಗಿ.